


ಪ್ರತ್ಯುತ್ತರ

ಸಂತಾನಿಗೆ ಗರ್ಲ್‌ಫ್ರೆಂಡ್ ಎಸ್ಸೆಮ್ಮೆಸ್ ಮಾಡಿದಳು.

'ಐ ಮಿಸ್ ಯೂ' 2 ಗಂಟೆಗಳಷ್ಟು ಸಮಯ ಗಹನವಾಗಿ ಯೋಚಿಸಿದ ಬಳಿಕ ಸಂತಾ ಪ್ರತ್ಯುತ್ತರ ಕಳಿಸಿದ,

'ಐ... ಮಿಸ್ಟರ್ ಯು'

★★★

2 ಇನ್ 1

ಹುಡುಗಿ: ಸಂತೋಷ ಹಾಗೂ ದುಃಖ ಎರಡೂ ಉಂಟಾಗುವ ಯಾವುದಾದರೊಂದು ವಾಕ್ಯ ಹೇಳಬಲ್ಲೆಯಾ?

ಹುಡುಗ: ನೀವು ತುಂಬಾ ಸುಂದರವಾಗಿದ್ದೀರಿ ಆಂಟಿ!

(ಸಂ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ



ವಾಸ್ತವ

ಆಕಳಿಕೆ: ಗಂಡನಿಗೆ ಹೆಂಡತಿಯ ಮುಂದೆ ಬಾಯಿ ತೆರೆಯಬಹುದಾದ ಏಕೈಕ ಅವಕಾಶ.

★★★

ನರ್ಸ್

ರೋಗಿ ಮಲಗಿದ್ದಾಗ ಎಬ್ಬಿಸಿ ನಿದ್ರೆ ಮಾತ್ರೆ ತೆಗೆದುಕೊಳ್ಳಲು ನೆನಪಿಸುವವಳು.

(ಸಂ)ವಿಶ್ವನಾಥ ಕೋಟೆ, ಧಾರವಾಡ

ಗುಂಡ: 'ಡಾಕ್ಟ್ರೇ ನನ್ನ ತಲೆ ಕೂದಲು ತುಂಬಾ ಉದುರುತ್ತಿದೆ. ಏನಾದರೂ ಕೊಡಿ.'

ವೈದ್ಯ: 'ತಗೊಳ್ಳಿ ಈ ಪ್ಲಾಸ್ಟಿಕ್ ಚೀಲ.'

(ಸಂ) ಎಂ.ಕೆ.ಮಂಜುನಾಥ್, ಬೆಂಗಳೂರು

---

ಗುಂಡ ತನ್ನ ಪತ್ನಿಯ ಬಗ್ಗೆ ಬಹಳಷ್ಟು ಸಿಟ್ಟು, ಅಸಮಾಧಾನದಿಂದ ತೃಪ್ತನಾಗಿದ್ದ. ಆ ಕೋಪದಿಂದಲೇ ತನ್ನ ಅತ್ತೆಗೆ ಫೋನಾಯಿಸಿದ.

ಗುಂಡ: ನಿಮ್ಮ ಮಗಳಲ್ಲಿ ಸಾವಿರಾರು ದೋಷಗಳಿವೆ.

ಅತ್ತೆ: ಹೌದು ಮಗೂ! ಅದರಿಂದಲೇ ಅವಳಿಗೆ ಉತ್ತಮ ಪತಿ ಸಿಗಲಿಲ್ಲ.

★★★

ಪತ್ನಿ: (ಫೋನ್‌ನಲ್ಲಿ) ಎಲ್ಲಿರುವಿರಿ?

ಪತಿ: ಬ್ಯಾಂಕ್‌ನಲ್ಲಿ

ಪತ್ನಿ ಸಂತಸದಿಂದ: ವಾವ್! ನನಗೊಂದು ಇಪ್ಪತ್ತು ಸಾವಿರ ರೂಪಾಯಿ ಬೇಕಾಗಿತ್ತು. 10,000/-ದ ಮೊಬೈಲ್, 4,000/- ಡ್ರೆಸ್...

ಪತಿ: ಪ್ಯಾರಿ ನಾನು ಬ್ಲಡ್ ಬ್ಯಾಂಕ್‌ನಲ್ಲಿರುವೆ!

★★★

ಪ್ರಸಿದ್ಧ ಈಜುಗಾರ ಗುಂಡನಿಗೆ ಜಂಭ ಕೊಚ್ಚಿಕೊಳ್ಳುವುದೆಂದರೆ ಬಹಳ ಪ್ರಿಯವಾದ ಕೆಲಸವಾಗಿತ್ತು. ಒಂದು ದಿನ ಒಬ್ಬ ಹಳ್ಳಿಯವನ ಜೊತೆ ಪರಿಚಯವಾಯಿತು.

ಗುಂಡ: ನೀನು ಈಜಬಲ್ಲೆಯಾ?

ಹಳ್ಳಿಯವ: ಇಲ್ಲ.

ಗುಂಡ: ಒಂದು ನಾಯಿ ನಿನಗಿಂತ ಉತ್ತಮ. ಯಾಕೆಂದರೆ ಅದು ಈಜಬಲ್ಲುದು.

ಹಳ್ಳಿಯವ: ನೀವು ಈಜಬಲ್ಲಿರಾ?

ಗುಂಡ: ಓಹೋ! ಖಂಡಿತಾ!

ಹಳ್ಳಿಯವ: ಹಾಗಾದರೆ ನಿಮಗೂ, ನಾಯಿಗೂ ಇರುವ ವ್ಯತ್ಯಾಸವಾದರೂ ಏನು?

★★★

ಡಾಕ್ಟರ್ ಮತ್ತು ಮಂಟಾಸಿಂಗ್ ಒಂದೇ ಹುಡುಗಿಯನ್ನು ಪ್ರೀತಿಸುತ್ತಿದ್ದರು. ಡಾಕ್ಟರ್ ದಿನನಿತ್ಯ ಆಕೆಗೆ ಗುಲಾಬಿ ಹೂವಿತ್ತರೆ, ಮಂಟಾಸಿಂಗ್ ಸೇಬು ನೀಡುತ್ತಿದ್ದ. ಯಾಕೆ? ಏಕೆಂದರೆ ಮಂಟಾಗೆ ಗೊತ್ತಿತ್ತು.

'ಆ್ಯನ್ ಆ್ಯಪಲ್ ಎ ಡೇ ಕೀಪ್ಸ್ ದಿ ಡಾಕ್ಟರ್ ಅವೇ.'

★★★

ಪೆಟ್ರೋಲ್ ಪಂಪ್‌ನಲ್ಲಿ ಒಂದು ಫಲಕ ಹೀಗಿತ್ತು.

'ದಯವಿಟ್ಟು ಧೂಮಪಾನ ಮಾಡಬೇಡಿ. ಏಕೆಂದರೆ ಪೆಟ್ರೋಲ್ ನಿಮ್ಮ ಪ್ರಾಣಕ್ಕಿಂತಲೂ ಅಮೂಲ್ಯ.'

(ಸಂ)ಶಾಲಿನಿ ವಿ. ಕಾಮತ್, ಮುಂಬಯಿ